ಮಧುರಾ ಕರ್ಣಮ್

ಕಲೆ: ಪ್ರವೀಣ್ ಆಚಾರ್ಯ

# ಸುಪ್ತಸಾಗರ

"ಸಪ್ತಸಾಗರದಾಚೆ ಎಲ್ಲೊ ಸುಪ್ತಸಾಗರ ಕಾದಿದೆ" ಎಂದು ಮೊಬೈಲ್ ರಿಂಗಣಿಸುತ್ತಲೇ ಉಪ್ಪಿಟ್ಟು ಮಾಡುತ್ತಿದ್ದವಳು ಧಾವಿಸಿ ಬಂದು ನೋಡಿದೆ. ಯಾವುದೋ ಅನ್‌ನೋನ್ ನಂಬರ್ ಕಾಣಿಸಿತು. ಕೊಂಚ ಕುತೂಹಲದಿಂದಲೇ ತೆಗೆದೆ. ಅತ್ತಲಿಂದ, "ಹೆಲೊ... ಪುಷ್ಪಾ... ನಾ ಮೈಥಿಲಿ ಮಾತಾಡ್ಲಿಕ್ಕತ್ತೇನಿ ಮುಂಬೈನಿಂದ. ಅದ... ಹುಬ್ಬಳ್ಳ್ಯಾಗ ನಿಮ್ಮನಿ ಬಾಜೂಕಿನ ಸರಜಕ್ಕನ ಸೊಸಿ. ಚಂದ್ರಕಾಂತನ ಮಿಸೆಸ್..." ಎಂಬ ಧ್ವನಿ ಉಲಿಯಿತು. ಅಚ್ಚರಿಪಡುತ್ತಲೇ, "ಹ್ಞಾಂ... ಗೊತ್ತಾತು. ಹೇಳ್ರಿ ವೈನಿ... ಹೆಂಗಿದ್ದೀರಿ? ನಿಮ್ಮ ಕಡೆ ಕರೊನಾ ಭಾಳ ಅದಲಾ?" ಎಂದು ಕೇಳಿದೆ. ಮನದಲ್ಲಿ, 'ಅದೇನಪ್ಪ... ಇಪ್ಪತ್ತೈದು ವರ್ಷಗಳ ನಂತರ ನಂಬರ್ ಹುಡುಕಿ ಫೋನ್ ಮಾಡಿದ್ದಾರಲ್ಲಾ...' ಎಂಬ ಆಶ್ಚರ್ಯ. "ಹ್ಞಾಂ... ಹೌದು... ಅಂಧಂಗ ನಿಂಜೋಡಿ ಒಂದರ್ಧಾ ತಾಸು ಮಾತಾಡಬೇಕಾಗಿತ್ತು. ಎಷ್ಟೊತ್ತಿಗೆ ಫ್ರೀ ಇರತೀ?" ಎಂದರು. ಮತ್ತೆ ತಬ್ಬಿಬ್ಬಾಗುವ ಸ್ಥಿತಿ. ಅರ್ಧ ಗಂಟೆ ಮಾತಾಡುವಂಥದ್ದೇನಿದೆ? ಸಾವರಿಸಿಕೊಳ್ಳುತ್ತ, "ಈಗ ಲಾಕ್‌ಡೌನ್ ನಡದದ. ಎಲ್ಲಾ ಬಂದ ಇದ್ರೂ ಎಸ್ಸೆನ್ಷಿಯಲ್ ಸರ್ವಿಸ್ ಅಂತ ನಮ್ಮನಿಯಾವ್ರಿಗೆ ಪಾಸ್ ಕೊಟ್ಟಾರ. ಅವರು ಬ್ಯಾಂಕಿಗೆ ಹೋಗಬೇಕು. ಅವರಿಗೆ ಡಬ್ಬಿ ಕಟ್ಟಿ ಕಳಸಿದ ಮ್ಯಾಲೆ... ಹನ್ನೊಂದು ಘಂಟೆಕ್ಕ ಫ್ರೀ" ಎಂದೆ. "ಓ.ಕೆ." ಎಂದ ಧ್ವನಿ ನಿಂತು ಹೋಯಿತು.

ಆಗಲೇ ಎಂಟೂವರೆಯಾಗುತ್ತಿತ್ತು. ಶ್ರೀನಾಥ ಸ್ನಾನ ಮುಗಿಸಿ ಬಂದು ಘಂಟೆ ಗಣಗಣ ಎನ್ನಿಸಿ ಎರಡೇ ನಿಮಿಷಗಳಲ್ಲಿ ಪೂಜೆ ಮುಗಿಸಿ ಟೇಬಲ್ಲಿಗೆ ಬಂದರು. ಉಪ್ಪಿಟ್ಟು ತಟ್ಟೆಗೆ ಬಡಿಸಿಟ್ಟು ಅವಸರದಿಂದಲೇ ಚಪಾತಿ ಬೇಯಿಸಿದೆ. ಪಲ್ಯದೊಂದಿಗೆ ಡಬ್ಬಿ ಕಟ್ಟಿದೆ. ಅವರೂ ತಿಂಡಿ ಮುಗಿಸಿ ಮಾಸ್ಕ್ ಧರಿಸಿ... ಕೈಗೆ ಗ್ಲವ್ಸ್ ಏರಿಸಿ... ಯುದ್ಧಕ್ಕೆ ಹೊರಟ ವೀರಯೋಧನಂತೆ ಹೊರಟರು. ಮಾಮೂಲಿ ದಿನಗಳಲ್ಲಾದರೆ ರಾಜಾಜಿನಗರದಿಂದ ಮಲ್ಲೇಶ್ವರದಲ್ಲಿರುವ ಬ್ಯಾಂಕ್ ಮುಟ್ಟಲು ಟ್ರಾಫಿಕ್ಕಿನಲ್ಲಿ ಒಂದು ಗಂಟೆಯಾಗುತ್ತಿತ್ತು. ಈಗ ಟ್ರಾಫಿಕ್ ಇಲ್ಲದ ಕಾರಣ ಹತ್ತೇ ನಿಮಿಷ ಸಾಕು. ಆದರೂ ಕಳಿಸಲು ಆತಂಕ. ಯಾವ ರೂಪದಲ್ಲಿ ಕರೊನಾಮಾರಿ ಅಮರಿಕೊಳ್ಳುವುದೋ ಗೊತ್ತಿಲ್ಲ. "ಹುಶಾರಾಗಿರ್ರಿ ಮ್ಯಾನೇಜರ್ ಸಾಹೇಬ್ರ" ಎಂದೆ. ಅವರು "ನೀನೂ ಅಷ್ಟ..." ಎಂದರು. ಕಾರು ಹೊರಟ ತಕ್ಷಣ ಬಾಗಿಲು ಮುಚ್ಚಿದೆ. ಮಗ ರಾತ್ರಿಯೆಲ್ಲ ನಿದ್ದೆಗೆಟ್ಟು ಓದಿದವನು, "ಮುಂಜಾನೆ ಎಬ್ಬಸಬ್ಯಾಡಮ್ಮಾ. ನಾನಾಗೇ ಏಳ್ತೇನಿ" ಎಂದಿದ್ದ. ಅವನ ಕೋಣೆಯತ್ತ ನೋಡಿ ಅಡುಗೆ ಮುಂದುವರೆಸಿದೆ. ಯಾಂತ್ರಿಕವಾಗಿ ಲಟ್ಟಣಿಗೆ ಲಟ್ಟಿಸುತ್ತಿತ್ತು. ಹೆಂಚು ಬೇಯಿಸುತ್ತಿತ್ತು. ಮನದಲ್ಲಿ ಮೈಥಿಲಿಯ ಫೋನು ಮತ್ತೆ ರಿಂಗಣಿಸಿತು. ವಿಷಯವೇನಿರಬಹುದೆಂಬ ಹುಳ ತಲೆ ಕೊರೆಯತೊಡಗಿತು. ಅದೇ ನೆಪದಿಂದ ಹಳೇ ಹುಬ್ಬಳ್ಳಿಯ ಚಿತ್ರ ಮನದಲ್ಲಿ ಮೂಡಿಬಂತು. ಸರಜಕ್ಕ... ಬಾಬೂರಾವ್... ಸುಮತಿ... ವಸುಮತಿ... ರವಿಕಾಂತ... ಚಂದ್ರ... ಚಂದ್ರಕಾಂತನ ನೆನಪಾಗುತ್ತಿದ್ದಂತೆ ಉಬ್ಬಿಸುತ್ತಿದ್ದ ಚಪಾತಿಯ